# <u>ಕರ್ನಾಟಕ ವಿಧಾನ ಪರಿಷತ್ತು</u>

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ, ಶ್ರೀ ಅ. ದೇವೇಗೌಡ, ಶ್ರೀ ಕೇಶವ ಪ್ರಸಾದ್ ಎಸ್, ಶ್ರೀ ಕೆ.ಎಸ್.ನವೀನ್ ಹಾಗೂ ಶ್ರೀ ಛಲವಾದಿ ನಾರಾಯಣಸ್ವಾಮಿ ಇವರುಗಳ ನಿಯಮ – 330 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆ.**

**<u>ಸೂಚನೆ</u> :**

ರಾಜ್ಯದಲ್ಲಿ ಪ್ರಸ್ತುತ ಬರಗಾಲವು ತಾಂಡವವಾಡುತ್ತಿದ್ದು, ಅನ್ನದಾತರು ಕಂಗಾಲಾಗಿ ಅಳಿದುಳಿದ ಬೆಳೆಯನ್ನು ಉಳಿಸಿಕೊಳ್ಳಲು ಆಗದೇ ಕೈ ಚೆಲ್ಲಿ ಕೂತಿರುವ ಸಮಯದಲ್ಲಿ ರಾಜ್ಯ ಸರ್ಕಾರವು ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ ಬಾಕಿ ಉಳಿಸಿಕೊಂಡಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ. ಪ್ರೋತ್ಸಾಹಧನ ಬಾಕಿ ಉಳಿಸಿಕೊಂಡಿರುವ ಕಾರಣ ಹಾಲು ಉತ್ಪಾದನೆಯು ಸಹ ಕುಂಠಿತಗೊಂಡಿದೆ. ಆದ್ದರಿಂದ ರೈತರು ಹಸುಗಳನ್ನು ಸಾಕಲು ನಿರಾಸಕ್ತಿ ತೋರುತ್ತಿದ್ದಾರೆ. ಸರ್ಕಾರವು ತನ್ನ ಪಶುಪಾಲನಾ ವಿರೋಧಿ ನೀತಿಗಳಿಂದ ಹಾಲು ಉತ್ಪಾದಕರ ಬದುಕನ್ನು ನಿರ್ನಾಮ ಮಾಡಲು ಹೊರಟಿರುವ ವಿಷಯ ಖಂಡನೀಯವಾಗಿದೆ. ಸರ್ಕಾರವು ಕಾಲಕಾಲಕ್ಕೆ ಬಿಡುಗಡೆ ಮಾಡಬೇಕಾದ ಪ್ರೋತ್ಸಾಹ ಧನವನ್ನು ಬಿಡುಗಡೆ ಮಾಡುತ್ತಿಲ್ಲ.

ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ ರಾಜ್ಯದಲ್ಲಿ ರೈತರಿಂದ ಪಡೆಯುತ್ತಿರುವ ಹಾಲಿನ ದರ ಅತ್ಯಂತ ಕಡಿಮೆ. ಇಂತಹ ಸಂದರ್ಭದಲ್ಲಿ ಅಲ್ಪ ಮೊತ್ತದ ಪ್ರೋತ್ಸಾಹ ಧನವನ್ನು ಸರಿಯಾದ ಸಮಯಕ್ಕೆ ನೀಡುತ್ತಿಲ್ಲ. ಹೀಗಾಗಿ ಹಾಲು ಉತ್ಪಾದಕರು ಹೈನುಗಾರಿಕೆ ಬಗ್ಗೆ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ. ಹಾಲು ಒಕ್ಕೂಟಗಳ ದರದ ಜೊತೆಗೆ ಪ್ರೋತ್ಸಾಹ ಧನವನ್ನು ನೀಡಿದರೆ ಮಾತ್ರ ಹಾಲು ಉತ್ಪಾದಕರು ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳಲು ಸಾಧ್ಯ.

ಆದುದರಿಂದ ರಾಜ್ಯ ಸರ್ಕಾರವು ಬಾಕಿ ಉಳಿಸಿಕೊಂಡಿರುವ ಪ್ರೋತ್ಸಾಹ ಧನವನ್ನು ಬಿಡುಗಡೆಗೊಳಿಸಿ ಹಾಗೂ ಪ್ರಸ್ತುತ ನೀಡುತ್ತಿರುವ ಪ್ರೋತ್ಸಾಹಧನವನ್ನು ಹೆಚ್ಚಿಸಿ ನೀಡಬೇಕೆಂದು ಸದನದಲ್ಲಿ ಪ್ರಸ್ತಾಪಿಸಲಾಗಿರುವ ಕುರಿತು.

**<u>ಹೇಳಿಕೆ:</u>**

ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ ಯೋಜನೆಯಡಿ ಹಾಲು ಉತ್ಪಾಕರಿಗೆ ಪ್ರತಿ ಲೀಟರ್ ಗುಣಮಟ್ಟದ ಹಾಲಿಗೆ ರೂ.5/-ರಂತೆ ಪ್ರೋತ್ಸಾಹಧನವನ್ನು ಪಾವತಿಸಲು 2023-24ನೇ ಸಾಲಿಗೆ ರೂ.1,168.70 ಕೋಟಿ ಅನುದಾನ ನಿಗಧಿಯಾಗಿರುತ್ತದೆ. ಇದುವರೆಗೆ ರೂ.977.22 ಕೋಟಿ ಅನುದಾನ ಬಿಡುಗಡೆ ಆಗಿರುತ್ತದೆ. ಸದರಿ ಅನುದಾನದಲ್ಲಿ 2022-23ನೇ ಸಾಲಿನ ಅಕ್ಟೋಬರ್-2022ರ ಮಾಹೆಯಿಂದ ಫೆಬ್ರುವರಿ-2023ರವರೆಗೆ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಬಾಕಿ ಇದ್ದ ಪ್ರೋತ್ಸಾಹಧನ ರೂ.412.07 ಕೋಟಿ ಹಾಗೂ 2019-20 ರಿಂದ 2022-23ನೇ ಸಾಲುಗಳ ಪೂರಕ ಪ್ರೋತ್ಸಾಹಧನ ರೂ.16.32ಕೋಟಿ ಒಟ್ಟಾರೆ ರೂ.429.07 ಕೋಟಿಗಳನ್ನು ಪ್ರಸಕ್ತ ಸಾಲಿನ ಅನುದಾನದಲ್ಲಿ ಪಾವತಿಸಲಾಗಿರುತ್ತದೆ.

2023-24ನೇ ಸಾಲಿನಲ್ಲಿ ಮಾರ್ಚ್-2023 ರಿಂದ ಜುಲೈ-2023ರ ಮಾಹೆಯವರೆಗೆ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಹಾಗೂ ಮಾರ್ಚ್-2023 ರಿಂದ ನವೆಂಬರ್-2023ರ ಮಾಹೆಯವರೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ರೂ.533.57 ಕೋಟಿ ಪ್ರೋತ್ಸಾಹಧನ ಪಾವತಿಸಲಾಗಿದೆ.

....2

152ನೇ 6
ಸಿ=370
SUMMARY 55



ಇದುವರೆಗೆ ಒಟ್ಟಾರೆ ರೂ.962.64 ಕೋಟಿ ಪ್ರೋತ್ಸಾಹಧನವನ್ನು ಫಲಾನುಭವಿಗಳಿಗೆ ಸಂದಾಯ ಮಾಡಲಾಗಿದೆ. ನಾಲ್ಕನೇ ಕಂತಿನ ಅನುದಾನ ಈಗಾಗಲೇ ಬಿಡುಗಡೆ ಮಾಡಲಾಗಿದೆ.

ನಾಲ್ಕನೇ ಕಂತಿನ ಅನುದಾನದಲ್ಲಿ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಆಗಸ್ಟ್-2023 ಮತ್ತು ಸೆಪ್ಟೆಂಬರ್-2023ರ ಮಾಹೆಗಳಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಡಿಸೆಂಬರ್-2023 ರಿಂದ ಫೆಬ್ರುವರಿ-2024ರ ಮಾಹೆಗಳಿಗೆ ಪ್ರೋತ್ಸಾಹಧನ ಪಾವತಿಸಲು ಕ್ರಮವಿಡಲಾಗುವುದು.

ಸಾಮಾನ್ಯ ವರ್ಗದ ಹಾಲು ಉತ್ಪಾದಕರಿಗೆ ಅಕ್ಟೋಬರ್-2023 ರಿಂದ ಫೆಬ್ರುವರಿ-2024 ರವರೆಗೆ ನೀಡಲು ಬಾಕಿ ಉಳಿಯಬಹುದಾದ ಪ್ರೋತ್ಸಾಹಧನ ಪಾವತಿಸಲು ಬೇಕಾಗುವ ಹೆಚ್ಚುವರಿ ರೂ.701.92 ಕೋಟಿ ಅನುದಾನದ ಪ್ರಸ್ತಾವನೆ ಆರ್ಥಿಕ ಇಲಾಖೆಯ ಪರಿಶೀಲನಾ ಹಂತದಲ್ಲಿದೆ. ಸರ್ಕಾರವು ಇತ್ತೀಚೆಗೆ ದಿನಾಂಕ:01.08.2023 ರಿಂದ ಹಾಲಿನ ಮಾರಾಟ ದರವನ್ನು ಪ್ರತಿ ಲೀಟರ್‌ಗೆ ರೂ.3.00 ಹೆಚ್ಚಿಸಿದ್ದು, ಹೆಚ್ಚಿನ ಮೊತ್ತವನ್ನು ಹಾಲು ಉತ್ಪಾದಕರಿಗೆ ನೀಡಲು ಕ್ರಮವಹಿಸಲಾಗಿರುವುದರಿಂದ ಸಧ್ಯಕ್ಕೆ ಹೈನುಗಾರರಿಗೆ ನೀಡಲಾಗುತ್ತಿರುವ ಪ್ರೋತ್ಸಾಹ ಧನವನ್ನು ಏರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

**ಇ- ಪಸಂಮೀ 36 ಸಲೆವಿ 2024**

**(ಕೆ. ವೆಂಕಟೇಶ್)**
**ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**